**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ**

ಸಿ.ಸಿ. ನಂ– 24/2023

**C.W.**1, **P.W.**1

| | | |
|---|---|---|
| ಹೆಸರು | : | ಭೀರಪ್ಪ ತಂ ಸದಾಶಿವ ನಾಗರಾಣ |
| ವಯಸ್ಸು | : | **51** ವರ್ಷ |
| ಉದ್ಯೋಗ | : | ಅಬಕಾರಿ ಉಪನಿರೀಕ್ಷಕರು, ಸಿಂದಗಿ ವಲಯ |
| ವಾಸಸ್ಥಳ | : | ಸಿಂದಗಿ |

ದಿನಾಂಕಃ 05.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ .**

ನಾನು ಸನ್ 2021 ರಿಂದ 2024 ರವೆಗೆ ಮುದ್ದೇಬಿಹಾಳ ಅಬಕಾರಿ ವಲಯದಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 22.11.2022 ರಂದು ಬೆಳಿಗ್ಗೆ 8–00 ಗಂಟೆಗೆ ನಾನು ಕಛೇರಿಯಲ್ಲಿದ್ದಾಗ ದೂರವಾಣಿ ಮುಖಾಂತರ ಹುಣಶ್ಯಾಳ ಗ್ರಾಮದಿಂದ ಬಂಡೆಪ್ಪನ ಸಾಲವಾಡಗಿ ಗ್ರಾಮಕ್ಕೆ ಅಕ್ರಮವಾಗಿ ದ್ವಿಚಕ್ರವಾಹನದಲ್ಲಿ ಮದ್ಯ ಸಾಗಾಟ ಮಾಡುತ್ತಾರೆ ಎಂದು ಬಾತ್ಮಿ ಬಂದಿದ್ದು, ಸದರಿ ಮಾಹಿತಿಯನ್ನು ನಾನು, ಚಾಸಾ–2 ಮತ್ತು 3 ರವರಿಗೆ ತಿಳಿಸಿ, ನಾವೆಲ್ಲರೂ ಕೂಡಿಕೊಂಡು ಬಂಡೆಪ್ಪನ ಸಾಲವಾಡಗಿ ಗ್ರಾಮದ ರೇಣುಕಾ ಯಲ್ಲಮ್ಮನ ದೇವಸ್ಥಾನದ ಹತ್ತಿರ ಗಸ್ತು ಕಾರ್ಯ

ಮಾಡುತ್ತಿದ್ದೆವು. ಆಗ ಸಮಯ ಬೆಳಿಗ್ಗೆ 9–00 ಗಂಟೆಯಾಗಿತ್ತು.

ಆ ಸಮಯದಲ್ಲಿ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದ ಮೇಲೆ ನಮ್ಮ ಕಡೆ ಬರುತ್ತಿದ್ದನು. ನಮಗೆ ಸಂಶಯ ಬಂದು ಕೈ ಸಣ್ಣೆ ಮಾಡಿ ನಿಲ್ಲಿಸಲು ಸೂಚಿಸಿದಾಗ ವಾಹನದ ಸವಾರನು ನಮ್ಮ ಸಮವಸ್ತ್ರವನ್ನು ನೋಡಿ ಗಾಬರಿಯಾಗಿ ಸ್ಥಳದಲ್ಲಿಯೇ ವಾಹನ ನಿಲ್ಲಿಸಿದನು. ಸದರಿ ವಾಹನದ ಮೇಲೆ ಬಿಳಿ ಬಣ್ಣದ ಬಟ್ಟೆ ಕೈಚೀಲ ಇದ್ದು, ಅದರಲ್ಲಿ ಏನಿದೆ ಎಂದು ವಿಚಾರಿಸಲಾಗಿ ಮದ್ಯದ ಟೆಟ್ರಾ ಪ್ಯಾಕೆಟ್‌ಗಳು ಇವೆ ಎಂದು ತಿಳಿಸಿದನು. ಅಲ್ಲಿದ್ದ ಜನರನ್ನು ಪಂಚರಾಗಿ ಕೇಳಲಾಗಿ ಯಾರೂ ಒಪ್ಪದ ಕಾರಣ ಚಾಸಾ–2 ಮತ್ತು 3 ರವರನ್ನು ಪಂಚರಾಗಿ ನೇಮಿಸಿಕೊಂಡು, ಸ್ಥಳದಲ್ಲಿಯೇ ಶೋಧನಾ ವಾರಂಟ್ ತಯಾರಿಸಿಕೊಂಡು ಚೀಲವನ್ನು ಪರಿಶೀಲಿಸಲಾಗಿ, ಅದರಲ್ಲಿ 180 ಎಂಎಲ್‌ದ ಬ್ಯಾಗ್‌ಪೈಪರ್ ವಿಸ್ಕಿಯ 32 ಟೆಟ್ರಾ ಪ್ಯಾಕೆಟ್‌ಗಳು ಮತ್ತು 90 ಎಂಎಲ್‌ದ ಓರಿಜಿನಲ್ ಚಾಯ್ಸು ವಿಸ್ಕಿ ಯ 96 ಟೆಟ್ರಾ ಪ್ಯಾಕೆಟ್‌ಗಳು ಒಟ್ಟು 128 ಟೆಟ್ರಾ ಪ್ಯಾಕೆಟ್‌ಗಳು ಇದ್ದವು. ಸದರಿ ವಾಹನವನ್ನು ಪರಿಶೀಲಿಸಲಾಗಿ ಕಪ್ಪ ಮತ್ತು ಕೆಂಪು ಮಿಶ್ರಿತ ಬಣ್ಣದ್ದಾಗಿದ್ದು, ವಾಹನ ಸಂಖ್ಯೆ ಕೆಎ–33 ವಾಯ್–7256 ಆಗಿರುತ್ತದೆ. ಸದರಿ ವ್ಯಕ್ತಿಯು ಮಾರಾಟ ಮಾಡುವ ಉದ್ದೇಶದಿಂದ ಸದರಿ ಟೆಟ್ರಾ ಪ್ಯಾಕೆಟ್‌ಗಳನ್ನು ಸಾಗಾಣಿಕೆ ಮಾಡುತ್ತಿರುವದು ಕಂಡು ಬಂದಿರುತ್ತದೆ. ಅವನ ಹೆಸರು ವಿಚಾರಿಸಲಾಗಿ ಮಂಜುನಾಥ ಗುಡಿಹಾಳ ಮತ್ತು ಸಂಗಣ್ಣ ಮಡ್ಡಿ ಎಂದು ತಿಳಿಸಿರುತ್ತಾರೆ. ನಂತರ ಆರೋಪಿತರ ವಶದಲ್ಲಿದ್ದ 180 ಎಂಎಲ್‌ದ ಬ್ಯಾಗ್‌ಪೈಪರ್ ವಿಸ್ಕಿಯ 10 ಟೆಟ್ರಾ ಪ್ಯಾಕೆಟ್‌ಗಳು ಮತ್ತು 90 ಎಂಎಲ್‌ದ ಓರಿಜಿನಲ್ ಚಾಯ್ಸು ವಿಸ್ಕಿ ಯ 15 ಟೆಟ್ರಾ ಪ್ಯಾಕೆಟ್‌ಗಳನ್ನು ರಾಸಾನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದು ವಿಧಿವತ್ತಾಗಿ ಸೀಲ್ ಮಾಡಲಾಯಿತು. ಸ್ಥಳದಲ್ಲಿಯೇ ಮಾದರಿಯ ನಕಲುಗಳನ್ನು

ತಯಾರಿಸಿ, ಬೆಳಿಗ್ಗೆ 10-00 ರಿಂದ 11-00 ಗಂಟೆಯವರೆಗೆ ಸವಿಸ್ತಾರ ಪಂಚನಾಮೆ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

ನಂತರ ಆರೋಪಿತರನ್ನು ಸ್ಥಳದಲ್ಲಿಯೇ ದಸ್ತಗಿರ ಮಾಡಿ, ಪಂಚನಾಮೆ, ಆರೋಪಿತರು ಮತ್ತು ಮಾಲಿನೊಂದಿಗೆ ಕಚೇರಿಗೆ ಬಂದು ಸರ್ಕಾರಿ ಪರವಾಗಿ ದೂರನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಆರೋಪಿತರನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಅಮಾನತ್ತುಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ಕಚೇರಿಯಲ್ಲಿ ಇಟ್ಟುಕೊಳ್ಳಲು ಅಬಕಾರಿ ಉಪ ಆಯುಕ್ತರು, ವಿಜಯಪೂರ ಇವರಿಗೆ ಪತ್ರ ಬರೆದು ಅನುಮತಿಪಡೆದುಕೊಂಡಿರುತ್ತೇನೆ. ದಿ. 01.12.2022 ರಂದು ಮುಂದಿನ ತನಿಖೆಯನ್ನು ಚಾಸಾ 5 ರವರಿಗೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಶೋಧನಾ ಸಮುಚ್ಚಿತ್ತ ವರದಿಯನ್ನು ತೋರಿಸಲಾಗಿ, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಮಾದರಿ ಸೀಲಿನ ನಕಲನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು, ಸಾಕ್ಷಿಯೂ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದೂರನ್ನು ತೋರಿಸಲಾಗಿ, ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ), ಅಬಕಾರಿ ಉಪಆಯುಕ್ತರು ವಿಜಯಪೂರ ಇವರಿಗೆ ಮುದ್ದೆಮಾಲುಗಳನ್ನು

ತಾಬಾದಲ್ಲಿ ಇಟ್ಟುಕೊಳ್ಳಲು ನೀಡಿದ ಪರವಾನಿಗೆ ಪತ್ರವನ್ನು ನಿಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯೂ ನ್ಯಾಯಾಲಯದ ಮುಂದೆ ಇರುವ ಒಟ್ಟು 25 ಟೆಟ್ರಾ ಪ್ಯಾಕೆಟ್‌ಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ಈಗ ಮು.ಮಾ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ಮು.ಮಾ–1(ಎ) ಎಂದು ಗುರುತಿಸಲಾಯಿತು.

ಆ ದಿನ ದಸ್ತಗಿರ ಮಾಡಿದ ವ್ಯಕ್ತಿಗಳು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿದ್ದಾರೆ ಎಂದು ಸಾಕ್ಷಿ ಅವರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ. ಕೆ ಹೆಚ್ ಸಿ ವಕೀಲರಿಂದ ಆರೋಪಿ ಪರವಾಗಿ**

ತಾಳಿಕೋಟೆಯಿಂದ ಹುಣಸಗಿಗೆ ಹೋಗುವ ರಸ್ತೆ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯ ಮೇಲೆ ಸಾಕಷ್ಟು ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಜನರು ಓಡಾಡುತ್ತಾರೆ ಎಂದರೆ ಸರಿ. ಬಂಡೆಪ್ಪನ ಸಾಲವಾಡಗಿ ಗ್ರಾಮ ಮುಖ್ಯ ರಸ್ತೆ ಹೊಂದಿಕೊಂಡಂತೆ ಇದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಜನರು ವಾಸ ಮಾಡುತ್ತಾರೆ ಎಂದರೆ ಸರಿ. ಬಂಡೆಪ್ಪನ ಸಾಲವಾಡಗಿ ಗ್ರಾಮ ತಾಳಿಕೋಟೆ ಮತ್ತು ಹುಣಸಗಿಯಿಂದ 10 ಕಿಮಿ ಅಂತರದಲ್ಲಿದೆ ಎಂದರೆ ಸರಿ. ಬಂಡೆಪ್ಪನ ಸಾಲವಾಡಗಿ ಗ್ರಾಮ ತಾಳಿಕೋಟೆ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ತಾಳಿಕೋಟೆ ಪೋಲಿಸರು ಗಸ್ತು ಕಾರ್ಯ ಮಾಡುತ್ತಾರೆ ಎಂದರೆ ಸರಿ. ಮುಮಾ–1 ಸರ್ಕಾರದಿಂದ ಮಾರಾಟಕ್ಕೆ ಮಾನ್ಯತೆ ಪಡೆದ ಮುದ್ದೆ ಮಾಲು ಎಂದರೆ ಸರಿ. ಮುಮಾ–1 ರಂತಹ ಟೆಟ್ರಾ ಪ್ಯಾಕ್‌ಗಳು ಮದ್ಯದ

ಅಂಗಡಿಯಲ್ಲಿ ದೊರೆಯುತ್ತವೆ ಎಂದರೆ ಸರಿ. ಮುಮಾ–1 ರಂತಹ ಬಾಟಲಿಗಳು ಮತ್ತು ಟೆಟ್ರಾ ಪ್ಯಾಕ್‌ಗಳು ಬೇರೆ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಂತಹವು ಕಚೇರಿಯಲ್ಲಿ ಇರುತ್ತವೆ ಎಂದರೆ ಸರಿ. ಮುಮಾಲಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಬಿಳಿ ಬಣ್ಣದ ಕೈಚೀಲ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಆದರೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ. ಆ ದಿನ ನಾನು ಬಂಡೆಪ್ಪನ ಸಾಲವಾಡಗಿ ಗ್ರಾಮಕ್ಕೆ ದಾಳಿಗೆ ಹೋಗಿರುವದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ವೈಯಕ್ತಿಕ ಕೆಲಸಕ್ಕಾಗಿ ಮುದ್ದೇಬಿಹಾಳಕ್ಕೆ ಬಂದಾಗ ದಸ್ತಗಿರ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸ್ಥಾನಿಕ ಪಂಚನಾಮೆ ಮಾಡಿರುವದಿಲ್ಲ ಮತ್ತು ಮಾದರಿ ಸಹಿಗಳನ್ನು ಪಡೆದುಕೊಂಡಿರುವದಿಲ್ಲ ಎಂದರೆ ಸರಿಯಲ್ಲ. ಕಾರ್ಯಾಲಯದಲ್ಲಿ ಕುಳಿತುಕೊಂಡು ಖೊಟ್ಟಿ ಪಂಚನಾಮೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಕಾರ್ಯಾಲಯದ ಅಂಕಿ ಸಂಖ್ಯೆಗೋಸ್ಕರ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ.